**ಒ.ಎಸ್ ನಂ. 60/2025 , ಪಿ. ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕಃ25-07-2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀಃ ಡಿ.ಎನ್.ಎಸ್ ಎರಡನೇ ಪ್ರತಿವಾದಿ ಪರ ವಕೀಲರಿಂದಃ**

1. ನಾನು 5 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ಈ ದಾವೆಯ ಬಗ್ಗೆ ನಮ್ಮ ವಕೀಲರಲ್ಲಿ ನಾನೇ ಮಾಹಿತಿ ನೀಡಿರುತ್ತೇನೆ. ನಾನು ವಾದ ಪತ್ರವನ್ನು ಓದಿ ನೋಡಿರುತ್ತೇನೆ. ದಿ. 10-06-1956 ರಲ್ಲಿ ನನ್ನ ಮದುವೆ ಆಗಿರುತ್ತದೆ. ಸದರಿ ದಿನಾಂಕವನ್ನು ವಾದ ಪತ್ರದಲ್ಲಿ ಬರೆಯಲಾಗಿರುತ್ತದೆಯೋ ಇಲ್ಲವೊ ಎಂದು ನನಗೆ ನೆನಪಿರುವುದಿಲ್ಲ, ಏಕೆಂದರೆ ನನ್ನ ಮಕ್ಕಳು ಬರೆಸಿರುತ್ತಾರೆ. ನಮ್ಮ ಮದುವೆಯು ಉಪನೊಂದಣಾಧಿಕಾರಿಯವರ ಕಚೇರಿಯಲ್ಲಿ ನೊಂದಣಿ ಆಗಿರುವುದಿಲ್ಲ. ನೀವು ನಿಮ್ಮ ಮದುವೆ ಆಮಂತ್ರಣ ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಿರೋ ಎಂಬ ಪ್ರಶ್ನೆಗೆ ಸಾಕ್ಷಿಯು ಹಳೆ ಕಾಲದಲ್ಲಿ ಆಮಂತ್ರಣ ಪತ್ರವನ್ನು ಬರೆಯಲಾಗುತ್ತಿರಲಿಲ್ಲ, ಆದ್ದರಿಂದ ಹಾಜರುಪಡಿಸಿಲ್ಲ. ನನ್ನ ಮತ್ತು ನನ್ನ ಗಂಡನ ಮದುವೆ ಫೋಟೋವನ್ನು ಆ ಕಾಲದಲ್ಲಿ ತೆಗೆಯದ ಕಾರಣ ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮದುವೆಯು ನನ್ನ ಸಣ್ಣ ಪ್ರಾಯದಲ್ಲಿ ಆಗಿರುತ್ತದೆ. ನನ್ನ ಮದುವೆಯಾಗುವಾಗ ನನಗೆ 21 ವರ್ಷ ವಯಸ್ಸಾಗಿತ್ತು.

2. ನಾನು ಈ ದಾವೆಯನ್ನು ಧನಲಕ್ಷ್ಮಿ ಅವರ ವಿರುದ್ಧ ಹಣದ ವಿಚಾರವಾಗಿ ದಾಖಲಿಸಿರುತ್ತೇನೆ. ಜಾನಕಿ ಮತ್ತು ಮಹಾಬಲ ಶೆಟ್ಟಿಯವರು ಎಷ್ಟು ವರ್ಷಗಳಿಂದ ಒಟ್ಟಿಗೆ ವಾಸ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಜಾನಕಿ ಯವರ ಪರಿಚಯ ಇರುವುದಿಲ್ಲ. ನನಗೆ ಧನಲಕ್ಷ್ಮಿ ಅವರು ಮತ್ತು ಅವರ ಸಹೋದರನಾದ ಪುರುಷೊತ್ತಮ ಯಾರು ಎಂದು ಗೊತ್ತಿಲ್ಲ. ಅವರು ಯಾರಾಗಿರುತ್ತಾರೆ ಎಂದು ನಿಮಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ಮನೆಯ ಹತ್ತಿರ ಮಹಾಬಲ ಶೆಟ್ಟಿ ಯವರು, ಅವರ ಪತ್ನಿ ಜಾನಕಿ ಮತ್ತು ಅವರ ಮಕ್ಕಳಾದ ಧನಲಕ್ಷ್ಮಿ ಹಾಗೂ ಪುರುಷೊತ್ತಮ ಶೆಟ್ಟಿಯವರು ವಾಸ ಮಾಡಿಕೊಂಡಿರುತ್ತಾರೋ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಊಟದ ವಿರಾಮವಾದ ಕಾರಣ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದುಡಲಾಯಿತು.**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ
ಸಹಿ/-
ವ್ಯ ನ್ಯಾ ಮತ್ತು ಪ್ರ.ದ.ನ್ಯಾ ದಂ.
ಮೂಡಬಿದರೆ